ಎಫ್ ಡಿ ಪಿ ನಂ. 7/2019
ಪಿ ಡಬ್ಲ್ಯು 1 / 4 ನೇ ಎದುರುದಾರರು
ದಿನಾಂಕ 22-04-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಅರ್ಜಿದಾರರ ಪರಃ ಶ್ರೀಮತಿ ಬಿ ಆರ್ ಆರ್ ವಕೀಲರಿಂದಃ

4. ಅಂಜನಪ್ಪರವರ ಎಷ್ಟು ಆಸ್ತಿಗಳಿಗೆ ಸಂಬಂದಪಟ್ಟಂತೆ ವಿಲ್ ನಾಮೆ ಬರೆದಿರುತ್ತಾರೆ ಎಂದರೆ ಸಾಕ್ಷಿ ಅವರ ಭಾಗಕ್ಕೆ ಬಂದ ಆಸ್ತಿಗಳ ಬಗ್ಗೆ ಎಂದು ನುಡಿಯುತ್ತಾರೆ. ಓ ಎಸ್ ನಂ.31/2015 ರ ದಾವೆಯಲ್ಲಿ ಅಂಜನಪ್ಪರವರ ಭಾಗಕ್ಕೆ ಬಂದ ಆಸ್ತಿಗಳಿಗೆ ಮಾತ್ರ ವಿಲ್ ನಾಮೆ ಆಗಿರುತ್ತದೆ ಎಂದರೆ ಸರಿ. ಓ ಎಸ್ ನಂ.31/2015 ರ ದಾವೆಯಲ್ಲಿ ಕಾಣಿಸಿರುವ ಆಸ್ತಿಗಳನ್ನು ಹೊರತು ಪಡಿಸಿ ಅಂಜನಪ್ಪರವರ ಹೆಸರಿನಲ್ಲಿ ಬೇರೆ ಆಸ್ತಿಗಳು ಸಹ ಇದ್ದವು ಎಂದರೆ ಸರಿ. ಪ್ರಸ್ತುತ ಪ್ರಕರಣದಲ್ಲಿ ಸದರಿ ಅಂಜನಪ್ಪರವರ ಹೆಸರಿನಲ್ಲಿ ಇದ್ದಂತಹ ಬೇರೆ ಆಸ್ತಿಗಳನ್ನು ಸಹ ಸೇರಿಸಲು ಅರ್ಜಿದಾರರಾದ ಶೋಭಾರವರು ಪ್ರತ್ಯೇಕ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಸ್ವತ್ತು ಸರ್ವೆ ನಂ.11/3 ರ ಮೂವತ್ತೆರಡೂವರೆ ಗುಂಟೆ ಆಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯ ಬಗ್ಗೆ ಅಂಜನಪ್ಪರವರು ವಿಲ್ ನಾವೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸಾಕ್ಷಿ ಹೇಳಿರಬಹುದು ಎಂದು ನುಡಿಯುತ್ತಾರೆ. ಮಲ್ಲಪ್ಪನಹಳ್ಳಿ ಗ್ರಾಮದ ಸರ್ವೆ ನಂ. 63/1 ರ 1 ಎಕರೆ 3 ಗುಂಟೆ ಸ್ವತ್ತನ್ನು ಸಹ ವಿಲ್ ನಾಮೆಯಲ್ಲಿ ಸೇರಿಸಿಲ್ಲ

ಎಂದರೆ ಸರಿ. ಹರುವನಹಳ್ಳಿ ಗ್ರಾಮದ ಅಸೆಸ್ಮೆಂಟ್ ನಂ. 122 ರ 70 x 70 ಅಡಿ ನಿವೇಶನವನ್ನು ಸಹ ವಿಲ್ ನಾಮೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸರ್ವೆ ನಂ. ಮೇಲೆ ಹೇಳಿದ ಮೂರು ಆಸ್ತಿಗಳು ಸಹ ಅಂಜನಪ್ಪರವರಿಗೆ ಸೇರಿದ ಆಸ್ತಿಗಳಾಗಿರುತ್ತವೆ ಎಂದರೆ ಸರಿ.

5. ಅಂಜನಪ್ಪರವರು ವಿಲ್ ನಾಮೆ ಬರೆಯಬೇಕುಎಂದು ಪ್ರಪ್ರಥಮವಾಗಿ ಯಾರಿಗೆ ತಿಳಿಸಿದರು ಎಂದರೆ ಸಾಕ್ಷಿ ವಕೀಲರಿಗೆ ಎಂದು ನುಡಿಯುತ್ತಾರೆ. ಯಾರು ಆ ವಕೀಲರು ಎಂದರೆ ಸಾಕ್ಷಿ ಕಡೂರಿನ ಸಿ ಬಾಲಾಜಿ ನಾಯ್ಕ ಎಂದು ನುಡಿಯುತ್ತಾರೆ. ಅವರನ್ನು ಅಂಜನಪ್ಪರವರೇ ಫೋನ್ ಮಾಡಿ ಕರೆಸಿರುತ್ತಾರೆ. ಅಂಜನಪ್ಪರವರು ಈ ರೀತಿ ವಿಲ್ ನಾಮೆ ಬರೆಯಬೇಕೆಂದು ಮಾಹಿತಿ ನೀಡಿದಾಗ ನಾನು ಹಾಜರಿದ್ದೇನಾ ಎಂದರೆ ಸಾಕ್ಷಿ ಆ ಸಮಯದಲ್ಲಿ ನಾನು ತೋಟಕ್ಕೆ ಹೋಗಿದ್ದೆ ಎಂದು ನುಡಿಯುತ್ತಾರೆ. ವಕೀಲರ ಜತೆ ಇನ್ಯಾರಾದರೂ ಬಂದಿದ್ದರಾ ಎಂದರೆ ಸಾಕ್ಷಿ ಅಂಜನಪ್ಪರವರು ವಿಲ್ ನಾಮೆ ಬರೆಯಲು ವಕೀಲರಿಗೆ ಮಾಹಿತಿ ನೀಡುವ ಸಮಯದಲ್ಲಿ ಬೇರೆ ಯಾರು ಬಂದಿರಲಿಲ್ಲ ಎಂದು ನುಡಿಯುತ್ತಾರೆ. ಸಿ ಬಾಲಾಜಿ ನಾಯ್ಕ ವಕೀಲರು ಮಾಹಿತಿ ಪಡೆದ ಎಷ್ಟು ದಿನಗಳ ನಂತರ ವಿಲ್ ನಾಮೆ ತಯಾರಿಸಿರುತ್ತಾರೆ ಎಂದರೆ ಸಾಕ್ಷಿ 2 ದಿನಗಳ ನಂತರ ಎಂದು ನುಡಿಯುತ್ತಾರೆ. ಸದರಿ ವಕೀಲರು ಏನೆಲ್ಲಾ ದಾಖಲೆಗಳನ್ನು ಪಡೆದಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿ ಓ ಎಸ್ ನಂ.31/2015 ರ

ತೀರ್ಪಿನ ಪ್ರತಿಯನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ತೀರ್ಪಿನ ಪ್ರತಿಯನ್ನು ನ್ಯಾಯಾಲಯದಿಂದ ನಾನೇ ಪಡೆದುಕೊಂಡು, ಆನಂತರ ನನ್ನ ತಂದೆಗೆ ನೀಡಿರುತ್ತೇನೆ. ಆ ರೀತಿ ತೀರ್ಪಿನ ಪ್ರತಿ ನೀಡುವ ಸಮಯದಲ್ಲಿ ನಾನು ಚಿಕ್ಕಮಗಳೂರಿನಲ್ಲಿ ಸಲ್ಲಿಸಿದ್ದ ಮೇಲ್ಮನವಿಯ ಪ್ರತಿಯನ್ನು ಏನೇನಾದರೂ ನನ್ನ ತಂದೆಗೆ ನೀಡಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಸದರಿ ವಿಲ್ ನಾಮೆಯಲ್ಲಿ ಮೇಲ್ಮನವಿ ಚಾಲ್ತಿಯಲ್ಲಿರುವ ಬಗ್ಗೆ ಏನಾದರೂ ತಿಳಿಸಿರುತ್ತಾರಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ವಿಲ್ ನಾಮೆ ಬರೆಯುವ ಕಾಲಕ್ಕೆ ಚಿಕ್ಕಮಗಳೂರಿನ ನ್ಯಾಯಾಲಯದಲ್ಲಿ ಮೇಲ್ಮನವಿ ವಿಚಾರಣೆಗೆ ಇತ್ತು ಎಂದರೆ ಸರಿ. ಬಾಲಾಜಿ ನಾಯ್ಕ ವಕೀಲರು ವಿಲ್ ನಾಮೆಯನ್ನು ತಯಾರು ಮಾಡಿ ಯಾವತ್ತು ತೋರಿಸಿರುತ್ತಾರೆ ಎಂದರೆ ಸಾಕ್ಷಿ ದಿನಾಂಕ 08/06/2020 ರಂದು ಎಂದು ನುಡಿಯುತ್ತಾರೆ. ವಿಲ್ ನಾಮೆ ತಯಾರಾದ ನಂತರ ಯಾವ ದಿನಾಂಕದಂದು ನೊಂದಣಿ ಮಾಡಿಸಬೇಕೆಂದು ಮಾತುಕತೆಯಾಗಿತ್ತು ಎಂದರೆ ಸಾಕ್ಷಿ ನೊಂದಣಿ ಕಚೇರಿಯಲ್ಲಿ ಯಾವ ದಿನಾಂಕವನ್ನು ನಿಗಧಿ ಮಾಡುತ್ತಾರೋ ಆ ದಿನ ನೊಂದಣಿ ಮಾಡಬೇಕೆಂದು ಆಗಿತ್ತು ಎಂದು ನುಡಿಯುತ್ತಾರೆ. ವಿಲ್ ನಾಮೆಯನ್ನು ನೊಂದಣಿ ಮಾಡಬೇಕೆಂದು ಯಾವ ದಿನಾಂಕದಂದು ದಾಖಲೆಗಳನ್ನು ನೊಂದಣಿ ಕಚೇರಿಗೆ ನೀಡಲಾಗಿರುತ್ತದೆ

ಮತ್ತು ಯಾರು ನೀಡಿರುತ್ತಾರೆ ಎಂದರೆ ಸಾಕ್ಷಿ ವಕೀಲರು ದಿನಾಂಕ 13/06/2020 ರಂದು ನೀಡಿರುತ್ತಾರೆ ಎಂದು ನುಡಿಯುತ್ತಾರೆ.

6. ಉಪನೊಂದಣಾಧಿಕಾರಿ ಕಚೇರಿಯ ಸಿಬ್ಬಂದಿಗಳು ನಮ್ಮ ಮನೆಗೆ ಬಂದ ಸಮಯದಲ್ಲಿ ನಾನು, ನನ್ನ ಹೆಂಡತಿ ಮಾಲ, ನನ್ನ ಅಕ್ಕ ಸುಧಾ, ನನ್ನ ಅಣ್ಣ ಶ್ರೀಧರ್ ರವರು ಹಾಜರಿದ್ದೇವು. ಉಪನೊಂದಣಾಧಿಕಾರಿಗಳು ತಂದಿದ್ದ ಪತ್ರಕ್ಕೆ ಯಾರು ಸಹಿ ಮಾಡಿದರು ಎಂದರೆ ಸಾಕ್ಷಿ ನನ್ನ ಹೆಂಡತಿ ಮಾಲ ಎಂದು ನುಡಿಯುತ್ತಾರೆ. ಸದರಿ ದಾಖಲೆಗೆ ಸುಧಾ ಮತ್ತು ಶ್ರೀಧರ್ ರವರು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಶ್ರೀಧರ್ ರವರು ಆ ದಿನ ತೋಟಕ್ಕೆ ಹೋಗಿದ್ದರು ಆನಂತರದಲ್ಲಿ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಆ ದಿನ ಆಂಗ್ಲ ಭಾಷೆಯಲ್ಲಿ ಸಹಿ ಮಾಡಿರುತ್ತಾರೆ. ಎಷ್ಟು ಪುಟಗಳಿಗೆ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಮರೆತಿದೆ ಎಂದು ನುಡಿಯುತ್ತಾರೆ. ನನ್ನ ತಂದೆ ಉಪನೊಂದಣಾಧಿಕಾರಿಗಳ ಕಚೇರಿಗೆ ಹೋಗಲು ಆಗುವುದಿಲ್ಲ ಮನೆಗೆ ಬಂದು ನೊಂದಣಿ ಪ್ರಕ್ರಿಯೆ ಜರುಗಿಸಬೇಕೆಂದು ಅರ್ಜಿ ನೀಡುವ ಸಮಯದಲ್ಲಿ ಉಪನೊಂದಣಾಧಿಕಾರಿಗಳಿಗೆ ಯಾವ ದಾಖಲೆಯನ್ನು ನೀಡಲಾಗಿತ್ತು ಎಂದರೆ ಸಾಕ್ಷಿ ನನ್ನ ತಂದೆಯ ವೈದ್ಯಕೀಯ ಪ್ರಮಾಣ ಪತ್ರ ನೀಡಲಾಗಿತ್ತು ಎಂದು ನುಡಿಯುತ್ತಾರೆ. ಯಾವ ವೈದ್ಯರಿಂದ ವೈದ್ಯಕೀಯ ಪ್ರಮಾಣ ಪತ್ರ ಪಡೆಯಲಾಗಿತ್ತು

ಎಂದರೆ ಸಾಕ್ಷಿ ವಾಸು ಎಂಬ ವೈದ್ಯರಿಂದ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಯಾವ ಆರೋಗ್ಯ ಸಮಸ್ಯೆಯಿಂದ ಉಪನೊಂದಣಿ ಕಚೇರಿಗೆ ಖುದ್ದಾಗಿ ಹೋಗಲು ಆಗುವುದಿಲ್ಲವೆಂದು ಪ್ರಮಾಣ ಪತ್ರ ನೀಡಲಾಗಿತ್ತು ಎಂದರೆ ಸಾಕ್ಷಿ prostactgland infection ನಿಂದ ಎಂದು ಪ್ರಮಾಣ ಪತ್ರ ನೀಡಲಾಗಿತ್ತು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನನ್ನ ತಂದೆಗೆ ಸ್ಟ್ರೋಕ್ ಆಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸುಮಾರು 15 ವರ್ಷಗಳ ಹಿಂದೆ ನನ್ನ ತಂದೆಗೆ ಬೆಲ್ ಎಂಬ ಸಮಸ್ಯೆ ಉಂಟಾಗಿದ್ದು, ಅದು ನಿವಾರಣೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಆರೋಗ್ಯದ ಸಮಸ್ಯೆಯಿಂದ ನನ್ನ ತಂದೆಗೆ ಮಾತನಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ.

7. ನೊಂದಾಯಿತ ವಿಲ್ ಪತ್ರ ಆಯಿತು ಎಂದು ಹೇಳಿದ್ದು ಅದಕ್ಕೆ ಸಾಕ್ಷಿದಾರರಾಗಿ ಯಾರು ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿ ಉಪನೊಂದಣಿ ಕಚೇರಿಯಲ್ಲಿ ಕಾಂತರಾಜು ಬಿನ್ ಚಂದ್ರನಾಯ್ಕ, ಎಂ ಕೋಡಿಹಳ್ಳಿ ಮತ್ತು ಬಸವರಾಜು ಪಿ ಜಿ ಬಿನ್ ಗಂಗಣ್ಣ, ಪರ್ವತನಹಳ್ಳಿ ಇವರು ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಇಬ್ಬರು ಸಾಕ್ಷಿಗಳ ವಯಸ್ಸು 50 ರ ಮೇಲೆ ಆಗಿರುತ್ತದೆ. ಅವರು ಯಾರು ಸಹ ನನ್ನ ತಂದೆಗೆ ಸ್ನೇಹಿತರಾಗಲಿ ಸಂಬಂಧಿಕರಾಗಲಿ ಆಗಿರುವುದಿಲ್ಲ ಎಂದರೆ ಸಾಕ್ಷಿ ಅವರು ನನ್ನ ತಂದೆಯ ಪರಿಚಯಸ್ಥರ ಮಕ್ಕಳು ಎಂದು ನುಡಿಯುತ್ತಾರೆ. ಮೇಲೆ ಹೇಳಿದ ಇಬ್ಬರು ಸಾಕ್ಷಿಗಳು

ಯಾವತ್ತು ಸಹ ನಮ್ಮ ಮನೆಗೆ ಬರುತ್ತಿರಲಿಲ್ಲ ಎಂದರೆ ಸಾಕ್ಷಿ ಅಪರೂಪಕ್ಕೊಮ್ಮೆ ಬರುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ದಿನಾಂಕ 15/06/2020 ರಂದು ಯಾವುದೇ ರೀತಿಯ ನೊಂದಾಯಿತ ವಿಲ್ ನಾಮೆಯನ್ನು ಮಾಡದೇ ಇದ್ದರೂ ಸಹ ಆಸ್ತಿಯನ್ನು ಕಬಳಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.